# ಇದು ಲೇಯರ್ ಕುರ್ತಿ ಕಾಲ!

**ಕುರ್ತಿ ಫ್ಯಾಷನ್ ಹಳೆಯದಾದರೂ ಲೇಯರ್ ಕುರ್ತಿ ಇಂದಿನ ಫ್ಯಾಷನ್ ಟ್ರೆಂಡ್. ಹಲವು ವರ್ಣ ಸಂಯೋಜನೆಯಲ್ಲಿ ಸಖತ್ ಗೆಟಪ್ ಕೊಡುವ ಈ ಲೇಯರ್ ಕುರ್ತಿ 'ಮಿಕ್ಸ್ ಅಂಡ್ ಮ್ಯಾಚ್'ಗೆ ಹೇಳಿಮಾಡಿಸಿದಂಥದ್ದು.**

■ **ಆಶಾ ಎಸ್. ಕುಲಕರ್ಣಿ**



ಸಲ್ವಾರ್, ಕುರ್ತಿ ಫ್ಯಾಷನ್ ಪ್ರಪಂಚದಲ್ಲಿ ಗಟ್ಟಿಯಾಗಿ ನೆಲೆಯೂರಿ ಬಹಳ ವರ್ಷಗಳೇ ಕಳೆದಿವೆ. ಇವೇ ಉಡುಪನ್ನು ಸ್ವಲ್ಪ ಮಾರ್ಪಾಡು ಮಾಡಿ, ಇಂದಿನ ಕಾಲದ ಟ್ರೆಂಡ್‌ಗೆ ತಕ್ಕಂತೆ ತಯಾರಿಸಿ ತೊಡುವುದರಲ್ಲಿ ಮಹಿಳೆಯರು ಆಸಕ್ತರಾಗಿದ್ದಾರೆ. ಫ್ಯಾಷನ್‌ಪ್ರಿಯ ಹೆಂಗಳೆಯರಿಗಾಗಿಯೇ ಹೊಸ ಬಗೆಯ ಕುರ್ತಿ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ. ಅದೇ ಲೇರ್ ಕುರ್ತಿ. ನೋಡಲು ಸೊಗಸಾಗಿರುವ ಈ ಕುರ್ತಿ ಹಲವು ವರ್ಣ ಸಂಯೋಜನೆಯಲ್ಲಿ ಗಮನಸೆಳೆಯುತ್ತದೆ.

ಕಾಲಕ್ಕೆ ತಕ್ಕಂತೆ ಮಹಿಳೆಯರ ಉಡುಗೆ ತೊಡುಗೆಗಳು ಬದಲಾಗುತ್ತಲೇ ಇರುತ್ತವೆ. ಹಳೆಯ ಫ್ಯಾಷನ್ ಮತ್ತೆ ಹೊಸ ರೂಪದೊಂದಿಗೆ ಮರಳಿ ಫ್ಯಾಷನ್ ಲೋಕಕ್ಕೆ ಎಂಟ್ರಿ ಕೊಡುತ್ತವೆ. ಇನ್ನು ಕೆಲವೊಂದು ಯಾವತ್ತೂ ಔಟ್ ಆಫ್ ಫ್ಯಾಷನ್ ಆಗುವುದೇ ಇಲ್ಲ. ಇವುಗಳ ಸಾಲಿನಲ್ಲಿ ಇದೀಗ ಸೇರಿದ ಲೇಯರ್ ಕುರ್ತಿಗಳು ಯುವತಿಯರಿಗೆ ಹೊಸ ಆಕರ್ಷಣೆ.

ಮೊದಲೆಲ್ಲಾ ಬರೀ ಉತ್ತರ ಭಾರತೀಯ ಮಹಿಳೆಯರು ಧರಿಸುತ್ತಿದ್ದ ಕುರ್ತಿಗಳು ಕಾಲ ಬದಲಾದಂತೆ ದಕ್ಷಿಣ ಭಾರತೀಯ ಮಹಿಳೆಯರ ಅಚ್ಚುಮೆಚ್ಚಿನ ಉಡುಗೆಗಳ ಸಾಲಿನಲ್ಲಿ ಸೇರಿಬಿಟ್ಟಿವೆ. ಕಾಲೇಜು ಹುಡುಗಿಯರಿರಲಿ, ಕಚೇರಿಗಳಲ್ಲಿ ಕೆಲಸ ಮಾಡುವ ಮಹಿಳೆಯರೇ ಇರಲೀ ಅವರು ಧರಿಸುವ ಎಲ್ಲಾ ಉಡುಪುಗಳಲ್ಲಿ ಅತ್ಯಂತ ಆರಾಮದಾಯಕ ಉಡುಪು ಎಂದರೆ ಕುರ್ತಿಗಳು. ಇವುಗಳನ್ನು ಲೆಗ್ಗಿನ್ಸ್, ಧೋತಿ, ಪಟಿಯಾಲಾ, ಸೆಮಿ ಪಟಿಯಾಲಾ, ಪಲಾಜೊ... ಹೀಗೆ ಯಾವುದೇ ತರಹದ ಪ್ಯಾಂಟ್‌ಗಳ ಜೊತೆ ಮ್ಯಾಚ್ ಮಾಡಿ ಧರಿಸಬಹುದಾಗಿದೆ.

ಮೊದಲೆಲ್ಲಾ ಬರೀ ಒಂದೇ ಬಣ್ಣಗಳಲ್ಲಿ ದೊರೆಯುತ್ತಿದ್ದ ಕುರ್ತಿಗಳು ಇದೀಗ ಮಹಿಳೆಯರ ಅಭಿರುಚಿಗೆ ತಕ್ಕಂತೆ ಎರಡು– ಮೂರು ಬಣ್ಣಗಳಲ್ಲಿ ಮಿಕ್ಸ್ ಮ್ಯಾಚ್ ಮಾಡಿ ಲೇಯರ್‌ಗಳ ಮಾದರಿಯಲ್ಲಿ ತಯಾರಿಸಲಾಗುತ್ತಿವೆ. ಕೆಲವರಿಗೆ ತಿಳಿ ಬಣ್ಣಗಳಾದ ಬೇಬಿ ಪಿಂಕ್, ತಿಳಿ ನೀಲಿ, ತಿಳಿ ಹಳದಿ, ಬೂದು ಬಣ್ಣ, ತಿಳಿ ಹಸಿರು ಹೀಗೆ ತಿಳಿಬಣ್ಣದ ಕುರ್ತಿಗಳು ಇಷ್ಟವಾಗುತ್ತಿವೆ. ಇನ್ನು ಕೆಲವರಿಗೆ ತಿಳಿ ಬಣ್ಣಗಳಲ್ಲಿಯೇ ಎರಡು ಮೂರು ಲೇಯರ್ ಗಳನ್ನು ಜೋಡಿಸಿ ತಯಾರಿಸಲಾದ ಕುರ್ತಿಗಳು ಇಷ್ಟವಾಗುತ್ತವೆ. ಮತ್ತೆ ಕೆಲವರಿಗೆ ತಿಳಿ ಬಣ್ಣದ ಜತೆ ಗಾಢ ಬಣ್ಣಗಳ ಲೇಯರ್ ಅನ್ನು ಅಳವಡಿಸಿರುವುದು ಕೂಡ ತೊಡಲು ಇಷ್ಟವಿರುತ್ತದೆ. ಅವರವರ ಅಭಿರುಚಿಗೆ ತಕ್ಕಂತೆ ವಿವಿಧ ಮೆಟಿರಿಯಲ್‌ಗಳಲ್ಲಿ ಇವನ್ನು ತಯಾರಿಸಲಾಗುತ್ತಿದೆ.

ಅವುಗಳಲ್ಲಿ ಪ್ರಮುಖವಾಗಿ ಖಾದಿ, ಹತ್ತಿ, ಉಣ್ಣೆ, ಶಿಫಾನ್, ಸ್ಯಾಟಿನ್, ರೆಯಾನ್, ನೈಲಾನ್ ಮುಂತಾದ ಮೆಟೀರಿಯಲ್‌ಗಳಲ್ಲಿ ಇವನ್ನು ತಯಾರಿಸಲಾಗುತ್ತಿವೆ. ಇನ್ನು ಬೇಸಿಗೆ ಕಾಲದಲ್ಲಿ ಖಾದಿ, ಉಣ್ಣೆ, ಹತ್ತಿಯಿಂದ